**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ. ನ್ಯಾಯಾಲಯ ನಂಜನಗೂಡು**

**ಸಿ.ಸಿ. ನಂ.404/2015**

ಪಿರ್ಯಾದಿದಾರರು : ಬದನವಾಳು ಪೊಲೀಸ್ ಠಾಣೆ

ವಿರುದ್ಧ

ಆರೋಪಿತರುಃ 1. ಮಾದೇಗೌಡ ಬಿನ್ ಲೇಟ್ ಮಾದೇಗೌಡ (ಮೃತಪಟ್ಟಿರುತ್ತಾರೆ)

2. ಸೋಮಣ್ಣ ಬಿನ್ ಮಾದೇಗೌಡ 45 ವರ್ಷ

3 ಬಸವರಾಜು ಬಿನ್ ಮಾದೇಗೌಡ 42 ವರ್ಷ

ವಾಸಃ ಮರಡಿಹುಂಡಿ ಗ್ರಾಮ, ನಂಜನಗೂಡು ತಾಲ್ಲೂಕು

**::ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿ ಆರೋಪಿತರ ಹೇಳಿಕೆ::**

ಪ್ರಶ್ನೆ 1- ಈ ಪ್ರಕರಣದಲ್ಲಿಯ ಸಾಕ್ಷಿದಾರರ ಹೇಳಿಕೆಗಳನ್ನು ಕೇಳಿಸಿಕೊಂಡಿದ್ದೀರಾ?

**2 ನೇ ಆರೋಪಿ ಉತ್ತರ-**

**3 ನೇ ಆರೋಪಿ ಉತ್ತರ-**

ಪ್ರಶ್ನೆ 2-ಪ್ರಾಸಾ-1-ಸಿದ್ದೇಗೌಡ ಉ.ಚಿಕ್ಕಸಿದ್ದೇಗೌಡ ರವರು ತಮ್ಮ ಸಾಕ್ಷ್ಯದಲ್ಲಿ, ಆರೋಪಿತರು ಗೊತ್ತು, ಚಾಸಾ 2 ರಿಂದ 5 ಗೊತ್ತು, ಈಗ್ಗೆ ಮೂರು ವರ್ಷಗಳ ಹಿಂದೆ ಬೆಳಿಗ್ಗೆ 9.00 ಗಂಟೆ ಸಮಯದಲ್ಲಿ ತಾನು ತಮ್ಮ ಹೊಲದಲ್ಲಿದ್ದಾಗ ಚಾಸಾ.2 ಮತ್ತು 5 ರವರು ಅಲ್ಲಿಗೆ ಬಂದಿದ್ದರು. ನಮ್ಮದು ಹಾಗೂ ಆರೋಪಿತರದು ಒಂದೇ ಜಮೀನು. 2 ನೇ ಆರೋಪಿ ತಮ್ಮ ಜಮೀನನ್ನು ಉಳುತ್ತಿದ್ದ. 2 ನೇ ಆರೋಪಿ ಜೊತೆಗೆ ಅವರ ತಂದೆ ಒಂದನೇ ಆರೋಪಿ ಮಾದೇಗೌಡ ಹಾಗೂ ಮೂರನೇ ಆರೋಪಿ ಬಸವರಾಜು ಇದ್ದರು. ಒಂದನೇ ಆರೋಪಿ ಮಚ್ಚಿನಿಂದ ತಲೆಗೆ ಹೊಡೆದ. 2 ನೇ ಆರೋಪಿ ಸೋಮಣ್ಣ ದೊಣ್ಣೆಯಿಂದ ಎಡ ಕೈ ತೋಳಿಗೆ, ಬೆನ್ನಿಗೆ ಹಾಗೂ ಸೊಂಟಕ್ಕೆ ಹೊಡೆದ. 3 ನೇ ಆರೋಪಿ ಬಸವರಾಜು ಕೈನಿಂದ ತೋಳಿಗೆ, ಮೈಕೈಗೆ ಹೊಡೆದ. ಜಗಳವನ್ನು ಚಾಸಾ 5 ಪುಟ್ಟಣ್ಣರವರು ಬಿಡಿಸಿದರು. ಚಾಸಾ 2 ಸಿದ್ದರಾಜುರವರು ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಬಂದರು. ಪೊಲೀಸರು ಆಸ್ಪತ್ರೆಯಲ್ಲಿ ತನ್ನ

ಹೇಳಿಕೆ ದೂರನ್ನು ಪಡೆದುಕೊಂಡಿರುತ್ತಾರೆ. ಆರೋಪಿತರು ಜಮೀನಿನ ವಿಚಾರವಾಗಿ ತನ್ನೊಂದಿಗೆ ಗಲಾಟೆ ಮಾಡಿರುತ್ತಾರೆ. ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಿದಾಗ, ತಾನು ಆರೋಪಿತರನ್ನು ತಮ್ಮ ಜಮೀನನ್ನು ಏಕೆ ಉಳುತ್ತಿದ್ದೀರಾ ಅಂತ ಕೇಳಿದ್ದಕ್ಕೆ ಒಂದನೇ ಆರೋಪಿ ಮಾದೇಗೌಡ ತನಗೆ ಬೋಳಿಮಗನೆ, ಸೂಳೆಮಗನೆ ಅಂತ ಅವಾಚ್ಯ ಶಬ್ದಳ್ಳಿದ ಬೈದಿರುತ್ತಾನೆ ಎಂದರೆ ಸರಿ, ಒಂದನೇ ಆರೋಪಿ ಮಾದೇಗೌಡ ಮಚ್ಚನ್ನು ಕೈಯಲ್ಲಿ ಹಿಡಿದುಕೊಂಡು ಜಮೀನಿನ ವಿಚಾರಕ್ಕೆ ಬಂದರೆ ನಿನ್ನನ್ನು ಕೊಲೆ ಮಾಡುತ್ತೇನೆ ಅಂತ ಬೆದರಿಕೆ ಹಾಕಿರುತ್ತಾನೆ ಎಂದರೆ ಸರಿ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

**2 ನೇ ಆರೋಪಿ ಉತ್ತರ-**

**3 ನೇ ಆರೋಪಿ ಉತ್ತರ-**

ಪ್ರಶ್ನೆ-3- ಪ್ರಾಸಾ.3 - ಪೂಣಚ್ಚ ಎನ್ ಎಂ ರವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 22.04.2014 ರಂದು ತಾನು ಈ ಕೇಸಿನ ಕಡತವನ್ನು ಚಾಸಾ-8 ರವರಿಂದ ಪಡೆದು ಪರಿಶೀಲಿಸಿ ತನಿಖೆಯನ್ನು ಮುಂದುವರೆಸಿರುತ್ತೇನೆ. ದಿನಾಂಕ 12.05.2014 ರಂದು ಗಾಯಾಳು ಚಾಸಾ-1 ರವರ ಗಾಯದ ಪ್ರಮಾಣ ಪತ್ರವನ್ನು ನಂಜನಗೂಡು ಸರ್ಕಾರಿ ಆಸ್ಪತ್ರೆಯ ವೈದ್ಯರಿಂದ ಪಡೆದಿರುತ್ತೇನೆ. ದಿನಾಂಕ 22.05.2014 ರಂದು ಸರ್ವೆ ನಂಬರ್ 101 ಮತ್ತು 102/1 ರ ಪಹಣಿ ಪತ್ರಿಕೆಗಳನ್ನು ತಾಲ್ಲೂಕು ಕಛೇರಿಯಿಂದ ಪಡೆದು ಕಡತಕ್ಕೆ ಅಳವಡಿಸಿರುತ್ತೇನೆ. ದಿನಾಂಕ 23.05.2014 ಪ್ರಕರಣದಲ್ಲಿ ತನಿಖೆ ಪೂರ್ಣಗೊಂಡು ಆರೋಪಿತರ ವಿರುದ್ಧ ಸಾಕಷ್ಟು ಸಾಕ್ಷ್ಯಾದಾರ ಇದ್ದುದರಿಂದಾಗಿ ಅವರುಗಳ ವಿರುದ್ಧ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

**2 ನೇ ಆರೋಪಿ ಉತ್ತರ-**

**3 ನೇ ಆರೋಪಿ ಉತ್ತರ-**

ಪ್ರಶ್ನೆ 4-ಪ್ರಾಸಾ-4-ಶಿವಣ್ಣ ಬಿ ವೈ ರವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 20.04.2014 ರಂದು ತಮ್ಮ ಠಾಣೆಯ ಪಿ.ಎಸ್.ಐ ರವರು ನಂಜನಗೂಡು ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ ಅಲ್ಲಿ ದಾಖಲಾಗಿದ್ದ ಚಾಸಾ-1 ರವರ ಹೇಳಿಕೆಯನ್ನು ಪಡೆದು ಕೊಂಡು ಬರುವಂತೆ ತನ್ನನ್ನು ನೇಮಕ ಮಾಡಿದ್ದರ ಮೇರೆಗೆ ತಾನು ಸದರಿ ಆಸ್ಪತ್ರೆಗೆ ಭೇಟಿ ನೀಡಿ ಚಾಸಾ-1 ರವರ ಹೇಳಿಕೆಯನ್ನು ನಂಜನಗೂಡು ಸರ್ಕಾರಿ ಆಸ್ಪತ್ರೆಯ ವೈದ್ಯರ ಸಮಕ್ಷಮ ಮಧ್ಯಾಹ್ನ 1.00 ರಿಂದ 2.00 ರವರೆಗೆ ಗಾಯಾಳುವಿನ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ. ನಂತರ ಅದೇ ದಿನ ಮಧ್ಯಾಹ್ನ 3.15 ಗಂಟೆಗೆ ಠಾಣೆಗೆ ಹೋಗಿ ಪಡೆದ ಚಾಸಾ-1 ರವರ ಹೇಳಿಕೆಯನ್ನು ಚಾಸಾ-8 ರವರ ಮುಂದೆ ಹಾಜರುಪಡಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

**2 ನೇ ಆರೋಪಿ ಉತ್ತರ-**

**3 ನೇ ಆರೋಪಿ ಉತ್ತರ-**

ಪ್ರಶ್ನೆ 5-ಪ್ರಾಸಾ-6-ಶ್ರೀ.ಕೋಟೇಗೌಡ ಹೆಚ್ ಎನ್ ರವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 20.04.2014 ರಂದು ಮದ್ಯಾಹ್ನ 3.15 ಗಂಟೆಗೆ ತಾನು ಠಾಣಾ ಪ್ರಭಾರದಲ್ಲಿ ಇದ್ದಾಗ ಚಾಸಾ-7 ರವರು ತಂದು ಹಾಜರುಪಡಿಸಿದ ಚಾಸಾ-1 ರವರ ಹೇಳಿಕೆಯನ್ನು ಸ್ವೀಕರಿಸಿ ಠಾಣಾ ಮೊ.ಸಂಖ್ಯೆ 96/2014 ರಲ್ಲಿ ಭಾ.ದಂ.ಸಂ.ಕಲಂ 323, 324, 504, 506 ಸಹವಾಚಕ ಕಲಂ 34 ರಡಿಯಲ್ಲಿ ಪ್ರಕರಣವನ್ನು ದಾಖಲಿಸಿಕೊಂಡು ಪ್ರ.ವ.ವ ವರದಿಯನ್ನು ನ್ಯಾಯಾಲಯಕ್ಕೆ ಮತ್ತು

ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ದಿನಾಂಕ 21.04.2014 ರಂದು ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಚಾಸಾ-2 ರವರು ತೋರಿಸಿದ ಕೃತ್ಯ ನಡೆದ ಸ್ಥಳದಲ್ಲಿ ಚಾಸಾ-3 ಮತ್ತು 4 ರವರ ಸಮಕ್ಷಮ ಬೆಳಗ್ಗೆ 10.15 ರಿಂದ 11.00 ರವರೆಗೆ ಸ್ಥಳ ಮಹಜರ್ ಜರುಗಿಸಿ ಆರೋಪಿತರು ಕೃತ್ಯಕ್ಕೆ ಬಳಸಿದ್ದ ಒಂದು ಕಬ್ಬಿಣದ ಮಚ್ಚು, ಒಂದು ಎರಡು ಅಡಿ ಉದ್ದದ ಬಿದಿರು ದೊಣ್ಣೆ ಮತ್ತು ಕೃತ್ಯ ನಡೆದ ದಿನ ಚಾಸಾ 1 ರವರು ಧರಿಸಿದ್ದ ಎಂದು ತುಂಬು ತೋಳಿನ ರಕ್ತದ ಕಲೆಯಾಗಿದ್ದ ಬಿಳಿಯ ಅಂಗಿಯನ್ನು ಚಾಸಾ 2 ರವರು ಹಾಜರು ಪಡಿಸಿದ ಮೇರೆಗೆ ಅಮಾನತ್ತು ಪಡಿಸಿಕೊಂಡು ಠಾಣಾ ಮಾಲುಪಟ್ಟಿ ಸಂಖ್ಯೆ 69/14 ರಲ್ಲಿ ಅಳವಡಿಸಿಕೊಂಡಿರುತ್ತೇನೆ. ಅದೇ ದಿನ ಸಾಕ್ಷಿದಾರರಾದ ಚಾಸಾ-2 ಮತ್ತು ಚಾಸಾ-5 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ.ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ-9 ರವರಿಗೆ ನೀಡಿರುತ್ತೇನೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

**2 ನೇ ಆರೋಪಿ ಉತ್ತರ-**

**3 ನೇ ಆರೋಪಿ ಉತ್ತರ-**

ಪ್ರಶ್ನೆ 6-ಪ್ರಾಸಾ-7-ಡಾ.ವಿಜಯನರಸಿಂಹ ರವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 20.04.2014 ರಂದು ಬೆಳಿಗ್ಗೆ 10.30 ಗಂಟೆ ಸಮಯದಲ್ಲಿ ಈ ಪ್ರಕರಣದ ಗಾಯಾಳು ಚಾಸಾ-1 ರವರು ಹಲ್ಲೆ ಇತಿಹಾಸದಲ್ಲಿ ಚಿಕಿತ್ಸೆಗಾಗಿ ತಮ್ಮ ಆಸ್ಪತ್ರೆಗೆ ಬಂದಾಗ ಅವರನ್ನು ಪರೀಕ್ಷಿಸಲಾಗಿ ಈ ಕೆಳಕಂಡ ಗಾಯಗಳು ಕಂಡು ಬಂದಿರುತ್ತದೆ.

1. ಎಡ ಮತ್ತು ಬಲ ಮುಂಗೈ ನಲ್ಲಿ 5*5 ಸೆಂಟಿಮೀಟರ್ ಅಳತೆಯ ಊತದ ಗಾಯ (Contusion on Left and Right Forearm measuring about 5*5 cm Blackening)

2. ತಲೆಯ ಮೇಲೆ 2*1/2 ಸೆಂಟಿಮೀಟರ್ ಅಳತೆಯ ರಕ್ತಸ್ರಾವದಿಂದ ಕೂಡಿದ ಹರಿದ ಗಾಯ (Lacerated wound over Vertex about 2*1/2 cm fresh bleeding)

ತನ್ನ ಅಭಿಪ್ರಾಯದಲ್ಲಿ ಈ ಮೇಲ್ಕಂಡ ಗಾಯಗಳು ಸಾಮನ್ಯ ಸ್ವರೂಪದ ಗಾಯಗಳಾಗಿರುತ್ತವೆ. ಈ ಮೇಲ್ಕಂಡ ಗಾಯಗಳು ಮಚ್ಚು ಮತ್ತು ದೊಣ್ಣೆಯಿಂದ ಹೊಡೆದಾಗ ಆಗುವ ಸಾಧ್ಯತೆ ಇರುತ್ತದೆ ಎಂದರೆ ಸರಿ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

**2 ನೇ ಆರೋಪಿ ಉತ್ತರ-**

**3 ನೇ ಆರೋಪಿ ಉತ್ತರ-**

ಪ್ರಶ್ನೆ7-ಈ ಪ್ರಕರಣದಲ್ಲಿ ತಾವೇನಾದರೂ ಹೇಳಲಿಕ್ಕೆ ಇದೆಯೇ?

**2 ನೇ ಆರೋಪಿ ಉತ್ತರ-**

**3 ನೇ ಆರೋಪಿ ಉತ್ತರ-**

ಪ್ರಶ್ನೆ 8- ತಮ್ಮ ಪರವಾಗಿ ಸಾಕ್ಷ್ಯ ವಿಚಾರಣೆ ಅಥವಾ ಯಾವುದಾದರೂ ದಾಖಲಾತಿಗಳನ್ನು ಹಾಜರುಪಡಿಸುವುದಕ್ಕೆ ಇದೆಯೇ?

**2 ನೇ ಆರೋಪಿ ಉತ್ತರ-**

**3 ನೇ ಆರೋಪಿ ಉತ್ತರ-**

(ಆರೋಪಿತರಿಗೆ ಹೇಳಿಕೆಯನ್ನು ಅವರಿಗೆ ತಿಳಿಯುವ ಹಾಗೆ ತೆರೆದ ನ್ಯಾಯಾಲಯದಲ್ಲಿ ಇಂದು ನನ್ನ ಸಮಕ್ಷಮ ಓದಿ ಹೇಳಿ ವ ಕೇಳಿ ಅವರು ಅದನ್ನು ತಿಳಿದುಕೊಂಡು ನಂತರ ಅವರು ಕೊಟ್ಟ ಉತ್ತರವನ್ನು ನಮೂದಿಸಿಕೊಳ್ಳಲಾಯಿತು)

ದಿನಾಂಕಃ17.03.2026

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ನಂಜನಗೂಡು